# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ಯಾಂತ್ರೀಕೃತ ದೋಣಿ ನಿರ್ಮಿಸಲು ಸಾಧ್ಯತಾ ಪತ ನೀಡುವ ಹಾಗೂ ಸಾಧ್ಯತಾ ಪತ್ರದ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ:- 1) ಆದೇಶ ಸಂಖ್ಯೆ: ಪಸಂಮೀ/109/ಮೀಇಯೋ/2016, ದಿನಾಂಕ: 21-11-2016.

2) ಪತ್ರ ಸಂಖ್ಯೆ: ಮೀನಿ/06/ಎಂಇಎಫ್/2020 ದಿನಾಂಕ: 25-01-2021 ಮತ್ತು 02-03-2021.

******

**ಪ್ರಸ್ತಾವನೆ:**

ಹೊಸ ದೋಣಿ ನಿರ್ಮಾಣಕ್ಕಾಗಿ ಸಾಧ್ಯತಾ ಪತ್ರ ಕೋರಿ ಹೆಚ್ಚಿನ ಮೀನುಗಾರರು ಬೇಡಿಕೆ ಸಲ್ಲಿಸಿದ ಕಾರಣ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 21-11-2016ರ ಆದೇಶದಲ್ಲಿ, ಆದೇಶ ಹೊರಡಿಸುವ ದಿನದವರೆಗೆ ಅಂದರೆ ದಿನಾಂಕ: 21-11-2016ರವರೆಗೆ ಸಲ್ಲಿಸಲಾಗಿರುವ ಎಲ್ಲಾ ಅರ್ಜಿಗಳನ್ನು ಪರಿಗಣಿಸಿ ಕೆಲವು ಷರತ್ತಿನೊಂದಿಗೆ ದೋಣಿ ನಿರ್ಮಾಣಕ್ಕೆ ಸಾಧ್ಯತಾ ಪತ್ರವನ್ನು ನೀಡುವಂತೆ ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಸದರಿ ಆದೇಶದಲ್ಲಿ ಸಾಧ್ಯತಾ ಪ್ರಮಾಣ ಪತ್ರ ಪಡೆದ ದಿನಾಂಕದಿಂದ 02 ವರ್ಷದೊಳಗೆ ದೋಣಿ ನಿರ್ಮಾಣ ಮಾಡುವಂತೆ ಷರತ್ತು ವಿಧಿಸಲಾಗಿರುತ್ತದೆ. ಆದರೆ, ಸಾಧ್ಯತಾ ಪತ್ರ ಪಡೆದವರು 02 (ಎರಡು) ವರ್ಷದೊಳಗೆ ದೋಣಿ ನಿರ್ಮಿಸದೇ ಪುನಃ ಕಾಲಾವಕಾಶ ಕೋರಿರುವ ಅರ್ಜಿಗಳ ಕುರಿತು ಕರಾವಳಿಯ ಎಲ್ಲಾ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರುಗಳ ವರ್ಚುವಲ್ ಸಭೆಯ ಮೂಲಕ ಪ್ರಗತಿ ಪರಿಶೀಲನಾ ಸಮಯದಲ್ಲಿ ಚರ್ಚಿತವಾಗಿ, ಈಗಾಗಲೇ ವಿತರಿಸಿರುವ ಸಾದ್ಯತಾ ಪತ್ರಗಳ ಅವಧಿ ಮುಗಿದಿದ್ದು ಬೋಟು ಬಿಲ್ಡಿಂಗ್ ಯಾರ್ಡ್ನಲ್ಲಿ ಸ್ಥಳಾವಕಾಶದ ಕೊರತೆ, ಕೋವಿಡ್-19 ಲಾಕ್-ಡೌನ್ ಹಿನ್ನೆಲೆ ಆರ್ಥಿಕ ಸಂಕಷ್ಟ ಹಾಗೂ ಲಾಕ್-ಡೌನ್ ಅವಧಿಯಲ್ಲಿ ಸ್ವಗ್ರಾಮಗಳಿಗೆ ತೆರಳಿದ್ದ ಕೆಲಸಗಾರರು ಮತ್ತೆ ಮರಳಿ ಬಂದಿಲ್ಲದಿರುವುದು ಇತ್ಯಾದಿ ಕಾರಣಗಳ ಹಿನ್ನೆಲೆಯಲ್ಲಿ ಬೋಟು ನಿರ್ಮಾಣ ವಿಳಂಬವಾಗಿದ್ದು, ದೋಣಿ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿ ಸಾಧ್ಯತಾ ಪತ್ರ ಪಡೆದುಕೊಂಡು ದೋಣಿ ನಿರ್ಮಾಣ ಕಾರ್ಯ ಪೂರ್ಣಗೊಳಿಸದ ಎಲ್ಲರಿಗೂ ಅಂತಿಮವಾಗಿ ಷರತ್ತು ಬದ್ಧ ಅನುಮತಿ ನೀಡಲು ಸರ್ಕಾರಕ್ಕೆ ಕೋರಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆಂದು ತಿಳಿಸಿರುತ್ತಾರೆ.

Kamakshi U.A

-2-

ಈ ಹಿನ್ನೆಲೆಯಲ್ಲಿ, ದಿನಾಂಕ: 21/11/2016 ರೊಳಗೆ ದೋಣಿ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿ ಸಾಧ್ಯತಾ ಪತ್ರ ಪಡೆದುಕೊಂಡು ನಿಗದಿತ ಅವಧಿಯೊಳಗೆ ದೋಣಿ ನಿರ್ಮಾಣ ಕಾರ್ಯ ಪೂರ್ಣಗೊಳಿಸದ ಎಲ್ಲರಿಗೂ ಪರಿಷ್ಕೃತ ಆದೇಶ ಹೊರಡಿಸುವ ಅಗತ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಆದೇಶದಲ್ಲಿ, ಸಾಧ್ಯತಾ ಪ್ರಮಾಣ ಪತ್ರ ಪಡೆಯಲು ಯಾವುದೇ ರೀತಿಯ ಅಂತಿಮ ಕಾಲಾವಧಿಯನ್ನು ವಿಧಿಸದಿರುವುದರಿಂದ ದಿನಾಂಕ: 21-11-2016 ರೊಳಗೆ ಅರ್ಜಿ ಸಲ್ಲಿಸಿದ್ದ ಬಹಳಷ್ಟು ದೋಣಿ ಮಾಲೀಕರು ತಕ್ಷಣದಲ್ಲಿ ಸಾಧ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳದೇ, ಇತ್ತೀಚೆಗೆ ಸಾಧ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಬರುತ್ತಿರುತ್ತಾರೆಂದು, ಇದಕ್ಕೆ ಅಂತಿಮ ದಿನಾಂಕ ನಿಗದಿಗೊಳಿಸಿ ಮುಕ್ತಾಯಗೊಳಿಸದ ಹೊರತು ಇದು ನಿಲ್ಲದ ಪ್ರಕ್ರಿಯೆಯಾಗುವುದೆಂದು ತಿಳಿಸಿರುತ್ತಾರೆ. ಹಾಗಾಗಿ ಇದಕ್ಕೆ ಒಂದು ಅಂತಿಮ ದಿನಾಂಕ ನಿಗದಿಗೊಳಿಸಿ ತದನಂತರ ಬರುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ತಿಳಿಸಿ ಮುಕ್ತಾಯಗೊಳಿಸುವುದು ಅವಶ್ಯ ಹಾಗೂ ಅಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ: 21-11-2016 ರೊಳಗೆ ದೋಣಿ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಸಾಧ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ದಿನಾಂಕ: 30/04/2021 ರವರೆಗೆ ಕಾಲಾವಧಿಯನ್ನು ನೀಡಿ, ಈ ಕಾಲಾವಧಿಯೊಳಗೆ ಸಾಧ್ಯತಾ ಪತ್ರ ಪಡೆದ ಅರ್ಜಿದಾರರಿಗೆ ಮಾತ್ರ ಮೂರು ವರ್ಷಗಳೊಳಗೆ ದೋಣಿ ನಿರ್ಮಿಸಿ, ನೋಂದಣಿ ಮಾಡಿಕೊಳ್ಳತಕ್ಕದ್ದು ಎಂಬ ಷರತ್ತು ವಿಧಿಸಿ ಆದೇಶ ಹೊರಡಿಸಲು ಹಾಗೂ ಈಗಾಗಲೇ ಸಾದ್ಯತಾ ಪತ್ರ ಪಡೆದು ಇನ್ನೂ ದೋಣಿ ನಿರ್ಮಿಸಲು ಸಾಧ್ಯವಾಗಿಲ್ಲದ ಅರ್ಜಿದಾರರಿಗೆ ಇನ್ನೂ ಒಂದು ವರ್ಷ ಕಾಲಾವಧಿಯನ್ನು ನೀಡಲು ಸಹ ಅವಕಾಶ ಕಲ್ಪಿಸಲು ಸರ್ಕಾರಿ ಆದೇಶ ಹೊರಡಿಸಲು ನಿರ್ದೇಶಕರು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ 109 ಮೀಇಯೋ 2016, ಬೆಂಗಳೂರು ದಿನಾಂಕ: 15-03-2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/109/ಮೀಇಯೋ/2016, ದಿನಾಂಕ: 21-11-2016 ರನ್ವಯ ಯಾಂತ್ರೀಕೃತ ದೋಣಿ ನಿರ್ಮಾಣಕ್ಕೆ ದಿನಾಂಕ: 21-11-2016 ರೊಳಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮಾತ್ರ ಸಾಧ್ಯತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ದಿನಾಂಕ: 30/04/2021 ರವರೆಗೆ ಕಾಲಾವಧಿಯನ್ನು ನೀಡಿ, ಈ ಕಾಲಾವಧಿಯೊಳಗೆ ಸಾಧ್ಯತಾ ಪತ್ರ ಪಡೆದ ಅರ್ಜಿದಾರರಿಗೆ ಮಾತ್ರ ಮೂರು ವರ್ಷಗಳೊಳಗೆ ದೋಣಿ ನಿರ್ಮಿಸಿ, ನೋಂದಣಿ ಮಾಡಿಕೊಳ್ಳಲು ಅನುಮತಿ ನೀಡಿ ಆದೇಶಿಸಲಾಗಿದೆ.

Kamakshi U.A.

ಈಗಾಗಲೇ ಸಾಧ್ಯತಾ ಪತ್ರ ಪಡೆದು ಇನ್ನೂ ದೋಣಿ ನಿರ್ಮಿಸಲು ಸಾಧ್ಯವಾಗಿಲ್ಲದ ಅರ್ಜಿದಾರರಿಗೆ ಇನ್ನೂ ಒಂದು ವರ್ಷ ಕಾಲಾವಧಿಯನ್ನು ಮೀನುಗಾರಿಕೆ ನಿರ್ದೇಶನಾಲಯದಿಂದ ಪಡೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

Kamakshi U.A. 15/3/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

15/03/2021

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಈ ಆದೇಶವನ್ನು ಮುದ್ರಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ.
5) ಮೀನುಗಾರಿಕೆ ಜಂಟಿ ನಿರ್ದೇಶಕರು, ಬಂದರುಗಳ ಯೋಜನೆ, ಮಲ್ಪೆ.
6) ಸಂಬಂಧಪಟ್ಟ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.

ಕರ್ನಾಟಕ ಸರ್ಕಾರ

## ಮೀನುಗಾರಿಕೆ ನಿರ್ದೇಶನಾಲಯ

3 ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001,

ದೂ: 080-22864681/4604 ಫ್ಯಾಕ್ಸ್: 080-22864619 ಇಮೇಲ್ : dfkarnataka@rediffmail.com

**ಸಂಖ್ಯೆ:ಡಿಎಫ್/06/ಎಂಇಎಫ್/2020** **ದಿನಾಂಕ: 01/04/2021**

**<u>ಸುತ್ತೋಲೆ</u>**

ವಿಷಯ: ಯಾಂತ್ರೀಕೃತ ಮೀನುಗಾರಿಕೆ ದೋಣಿ ನಿರ್ಮಾಣಕ್ಕೆ ಸಾಧ್ಯತಾ ಪತ್ರದ ಅವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ (1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 109 ಮೀಇಯೋ/2016 ಬೆಂಗಳೂರು ದಿನಾಂಕ:15.03.2021

(2) ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 15/03/2021

(3) ದಿನಾಂಕ:01/04/2021 ರಂದು ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರ ಮೌಖಿಕ ಆದೇಶದಂತೆ

****

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ-1ರಲ್ಲಿ ಸರ್ಕಾರದ ಆದೇಶದಂತೆ ಮೀನುಗಾರಿಕೆ ಯಾಂತ್ರೀಕೃತ ದೋಣಿ ನಿರ್ಮಿಸಲು ಸಾಧ್ಯತಾ ಪತ್ರ ನೀಡುವ ಹಾಗೂ ಸಾಧ್ಯತಾ ಪತ್ರದ ಅವಧಿ ವಿಸ್ತರಣೆ ಕುರಿತಂತೆ ಆದೇಶದ ಎರಡನೇ ಭಾಗವಾದ ಅಂಶ ಈ ಕೆಳಗಿನಂತೆ ಆದೇಶಿಸಿದೆ.

"ಈಗಾಗಲೇ ಸಾಧ್ಯತಾ ಪತ್ರ ಪಡೆದು ಇನ್ನೂ ದೋಣಿ ನಿರ್ಮಿಸಲು ಸಾಧ್ಯವಾಗಿಲ್ಲದ ಅರ್ಜಿದಾರರಿಗೆ ಇನ್ನೂ ಒಂದು ವರ್ಷ ಕಾಲಾವಧಿಯನ್ನು ಮೀನುಗಾರಿಕೆ ನಿರ್ದೇಶನಾಲಯದಿಂದ ಪಡೆಯತಕ್ಕದ್ದು" ಎಂದಿರುತ್ತದೆ. ಅದರಂತೆ ಉಲ್ಲೇಖ-2ರಲ್ಲಿ ಸದರಿ ಆದೇಶದಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲು ಸೂಚಿಸಿ ಹಾಗೂ ನಿರ್ದೇಶನಾಲಯಕ್ಕೆ ಸಲ್ಲಿಸುವ ಪ್ರಸ್ತಾವನೆಯಲ್ಲಿ ಕಚೇರಿ ಪತ್ರ ಸಂ:ಮೀನಿ/106/ಎಂಇಎಫ್/2018 ದಿನಾಂಕ:02/01/2021 ರಂತೆ ಕ್ರಮವಹಿಸುವಂತೆ ತಿಳಿಸಲಾಗಿತ್ತು. ಆದರ ಉಲ್ಲೇಖ-3ರಲ್ಲಿ ದಿನಾಂಕ:01/04/2021 ರಂದು ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರು ಮೌಖಿಕವಾಗಿ **"ಒಂದು ವರ್ಷದ ಕಾಲಾವಧಿಯನ್ನು ಮೀನುಗಾರಿಕೆ ನಿರ್ದೇಶನಾಲಯದಿಂದ ಪಡೆಯತಕ್ಕದ್ದು"** ಎಂಬ ಅಂಶವನ್ನು ತೆಗೆದು "ಒಂದು ವರ್ಷದ ಕಾಲಾವಧಿಯನ್ನು ಕರಾವಳಿ ಜಿಲ್ಲೆಯ ಮೀನುಗಾರಿಕೆ ಹಿರಿಯ ಉಪನಿರ್ದೇಶಕರುರವರಿಂದ ಪಡೆಯತಕ್ಕದ್ದು" ಎಂದು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು ಎಂದು ತಿಳಿಸಿರುತ್ತಾರೆ. ಹಾಗಾಗಿ ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರು ಮೌಖಿಕವಾಗಿ ಸೂಚಿಸಿದಂತೆ **"ಒಂದು ವರ್ಷದ ಕಾಲಾವಧಿಯನ್ನು ಮೀನುಗಾರಿಕೆ ನಿರ್ದೇಶನಾಲಯದಿಂದ ಪಡೆಯತಕ್ಕದ್ದು"** ಎಂಬ ಅಂಶವನ್ನು **"ಒಂದು ವರ್ಷದ ಕಾಲಾವಧಿಯನ್ನು ಕರಾವಳಿ ಜಿಲ್ಲೆಯ ಮೀನುಗಾರಿಕೆ ಹಿರಿಯ ಉಪನಿರ್ದೇಶಕರುರವರಿಂದ ಪಡೆಯತಕ್ಕದ್ದು"** ಎಂದು ಓದಿಕೊಳ್ಳತಕ್ಕದ್ದು ಎಂದು ತಿಳಿಸುತ್ತಾ ಅದರಂತೆ ಕ್ರಮಕೈಗೊಳ್ಳಲು ತಿಳಿಸಿದೆ.

Ramachandra 1/4/21

ಮೀನುಗಾರಿಕೆ ನಿರ್ದೇಶಕರು

ಗೆ: ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು, ಮಂಗಳೂರು, ಉಡುಪಿ, ಕಾರವಾರ